ಹರಿಹರ ತಾಲ್ಲೂಕಿಂ ಮಲೆಬೆನ್ನೂರಿನಿಂದ ಹೊನ್ನಾಳಿಗೆ ರಸ್ತೆ ಸಾರಿಗೆ ನಿಗಮದ ಬಸ್ಸುಗಳನ್ನು ಓಡಿಸುವ ಬಗ್ಗೆ.

ಶ್ರೀ ಡಿ. ಜಿ. ಬಸವನಗೌಡ (ಹೊನ್ನಾಳಿ).—ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹರಿಹರ ತಾಲ್ಲೂಕು ಮಲೆಬೆನ್ನೂರಿನಿಂದ ಹೊನ್ನಾಳಿ ತಾಲ್ಲೂಕು ತಿಮ್ಲಾಪುರ, ಹನಂವಂನ ಹಳ್ಳಿ, ಪರಿಗನಗಳ್ಳಿ ಮಂಖಾಂತರ ಹೊನ್ನಾಳಿಗೆ ರಸ್ತೆ ಸಾರಿಗೆ ನಿಗವಂದ ಬಸ್ಸುಗಳನ್ನು ಓಡಿಸಲು ಸದರೀ ಗ್ರಾಮಸ್ಥರು ಸರ್ಕಾರದವರನ್ನು ಒತ್ತಾಯಿಸುತ್ತಿರುವುದಂ ನಿಜವೇ,

ಆ) ಹಾಗಿದ್ದಲ್ಲಿ ಈಗಲಾದರೂ ವೇಂಲ್ಕಂಡ ಗ್ರಾಮಗಳಿಗೆ ಬಸ್ಸುಗಳನ್ನು ಓಡಿಸಲು ಸರ್ಕಾರ ದವರಂ ಕ್ರಮ ಕೈಗೊಳ್ಳುವರೇ ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಹಾಗೂ ವಸತಿ ರಾಜ್ಯ ಸಚಿವರು).—

ಅ) ಹೌದು.

ಆ) ಯಕ್ಕನಹಳ್ಳಿಯಿಂದ ತಿಮ್ಲಾಪುರವರೆಗಿನ ಒಂದೂವರೆ ಕಿ.ಮೀ.ಗಳ ರಸ್ತೆಯು ಮೋಟಾರು ವಾಹನ ಸಂಚಾರಕ್ಕೆ ಯೋಗ್ಯವಾಗಿಲ್ಲವಾದ್ದರಿಂದ ಸದರಿ ರಸ್ತೆಯ ಭಾಗವು ವಾಹನ ಸಂಚಾರ ಯೋಗ್ಯ ವೆನಿಸುವಷ್ಟು ದುರಸ್ತಿಯಾದ ನಂತರವೇ ಬಸ್ಸುಗಳನ್ನು ಓಡಿಸುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳ ಬಹುದು.

ಶ್ರೀ ಡಿ. ಜಿ. ಬಸವನಗೌಡ.— ಮಾನ್ಯ ಅಧ್ಯಕ್ಷರೇ, ನಾನು ಕೇಳಿರುವ ಹಾಗೆ ಮಾನ್ಯ ಮಂತ್ರಿಗಳು ಬಸ್ಸುಗಳನ್ನು ಕೊಡುತ್ತೇನೆ ಎನ್ನುವ ಭರವಸೆಯನ್ನು ಕೊಟ್ಟಿದ್ದಾರೆ. ಇಲಾಖೆಯವರು ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. ಹರಿಹರ–ಶಿವಮೊಗ್ಗಕ್ಕೆ ಹೋಗತಕ್ಕ ಬಸ್ಸು, ಹಾಗೂ ಶಿವಮೊಗ್ಗದಿಂದ ಹರಿಹರಕ್ಕೆ ಹೋಗತಕ್ಕ ಬಸ್ಸುಗಳನ್ನು ತಿಮ್ಲಾಪುರ, ಹನುಮನಹಳ್ಳಿ ಮತ್ತು ಪರಿಗನಹಳ್ಳಿ ಮುಖಾಂತರ ಓಡಿಸಿದರೆ ಅಲ್ಲಿಯ ಜನರಿಗೆ ಅನುಕೂಲವಾಗಂತ್ತದೆ. ಅದನ್ನು ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಯಕ್ಕನಹಳ್ಳಿ ರೂಟ್ ಬೇರೆ ಇದೆ. ಪಂಂರ್ನಾಲ್ಕಂ ಖೋಕಲ್ ಬಸ್ಸುಗಳನ್ನು ಡಿವಿಯೇಟ್ ಮಾಡಿ ಅಲ್ಲಿಗೆ ಬಿಡಬೇಕಂ.

ಶ್ರೀ ಪಿ. ಜಿ. ಆರ್. ಸಿಂಧ್ಯ,—ಮಾನ್ಯ ಸದಸ್ಯರಂ ಹೇಳತಕ್ಕ ರೂಟ್ ಇನ್ನೂ ರಾಷ್ಟ್ರೀಕರಣ ವಾಗಿಲ್ಲ. ಖಾಸಗಿ ಬಸ್‌ನವರು ಸಮಯಕ್ಕೆ ಸರಿಯಾಗಿ, ಟ್ರಾಫಿಕ್ ಯಾವಾಗ ಇರುತ್ತದೆ ಅದನ್ನು ನೋಡಿಕೊಂಡು ಅವರು ಬಸ್ಸುಗಳನ್ನು ಓಡಿಸುತ್ತಿದ್ದಾರೆ. ನಮ್ಮ ಬಸ್ಸುಗಳನ್ನು ಮುಕ್ಕಳಂ ಶಾಲೆಗೆ ಹೋಗಂವ ವೇಳೆಗೆ ಓಡಿಸುತ್ತಿದ್ದೇವೆ. ಟ್ರಾಫಿಕ್ ಇರುವಾಗಲೇ ಬಸ್ಸುಗಳನ್ನು ಓಡಿಸಬೇವುದು ನಮಗೆ ಕಷ್ಟವಾಗುತ್ತದೆ. ಆದರೂ ಸಹಿತ ನಮ್ಮ ಅಧಿಕಾರಿಗಳ ಜೊತೆಯಲ್ಲಿ ಮಾನ್ಯ ಸದಸ್ಯರನ್ನು ಕೂರಿಸಿ ಕೊಂಡು ಆದಷ್ಟು ಬಸ್ಸುಗಳನ್ನು ಓಡಿಸುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ ಎನ್ನುವ ಭರವಸೆಯನ್ನು ಮಾನ್ಯ ಸದಸ್ಯರಿಗೆ ಕೊಡುತ್ತೇನೆ.

ಮೈಸೂರಿನ ಹೊಸ ಬಡಾವಣೆಗಳಲ್ಲಿ ಮನೆಗಳನ್ನು ಕೆಡವಿರಂವುದಂ.

೬೨೪. ಶ್ರೀಮತಿ ಮುಕ್ತರುನ್ನೀಸಾ (ನರಸಿಂಹರಾಜ) ಮಾನ್ಯ ನಗರಾಭಿವೃದ್ಧಿ ಮಂಡಲಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮೈಸೂರಂ ನಗರದಲ್ಲಿ ಈಚೆಗೆ ಬಂದಿರತಕ್ಕ ಹೊಸ ಬಡಾವಣೆಗಳು ಎಷ್ಟು ?

ಆ) ಡಿಸೆಂಬರ್ ಮಾಹೆ ಮೂರನೆಯ ವಾರದಲ್ಲಿ ಮುಖ್ಯ ಮಂತ್ರಿಗಳು ಮೈಸೂರಿಗೆ ಭೇಟಿನೀಡಿ ದಾಗ ಈ ಪ್ರದೇಶಗಳಲ್ಲಿನ ಮನೆಗಳನ್ನು ಕೆಡವಿದುದರಿಂದ ನಿರ್ವಸಿತರಾದವರಿಗೆಲ್ಲ ನಿವೇಶನಗಳನ್ನು ಪುನ: ಕೊಡುವ ಹಾಗೂ ಪರಿಹಾರ ಧನ ನೀಡುವ ಬಗ್ಗೆ ಆಶ್ವಾಸನೆ ನೀಡಲಾಗಿದೆಯೆ ?

ಇ) ಇಲ್ಲಿಯವರೆಗೆ ಕೈಗೊಂಡ ಕ್ರಮ.